# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 922 (1032) |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಗೋವಿಂದ ರಾಜು (ವಿಧಾನ ಸಭಾ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 16.12.2025 |
| ಉತ್ತರಿಸುವ ಸಚಿವರು | : | ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು |

<table>
<tr><th>ಕ್ರ.<br>ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕೋಲಾರ ಹಾಗೂ ಮಾಲೂರು ತಾಲ್ಲೂಕಿನ ಶಿವಾರಪಟ್ಟಣ, ರಾಮೇನಹಳ್ಳಿ, ಕಣಿವೇನಹಳ್ಳಿ, ಹುಂಗೇನಹಳ್ಳಿ ಹಾಗೂ ವರದೇನಹಳ್ಳಿ ಗ್ರಾಮಗಳ ಒಟ್ಟು 1603 ಎಕರೆ 37½ ಗುಂಟೆಯನ್ನು ಭೂಸ್ವಾಧೀನ ಮಾಡಿಕೊಳ್ಳಲು ಸರ್ಕಾರದಿಂದ ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿದೆಯೇ;</td><td>ಕೋಲಾರ ಹಾಗೂ ಮಾಲೂರು ತಾಲ್ಲೂಕಿನ ಶಿವಾರಪಟ್ಟಣ, ರಾಮೇನಹಳ್ಳಿ, ಕಣಿವೇನಹಳ್ಳಿ, ಹುಂಗೇನಹಳ್ಳಿ ಹಾಗೂ ವರದೇನಹಳ್ಳಿ ಗ್ರಾಮಗಳ ಒಟ್ಟು 1603 ಎಕರೆ 37½ ಗುಂಟೆಯನ್ನು ಭೂಸ್ವಾಧೀನ ಮಾಡಿಕೊಳ್ಳಲು ಸರ್ಕಾರದಿಂದ ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿರುತ್ತದೆ.</td></tr>
<tr><td>ಆ)</td><td>ಈ ಮೇಲಿನ 1603 ಎಕರೆ 37½ ಗುಂಟೆ ಜಮೀನುಗಳಲ್ಲಿ ಸಾಕಷ್ಟು ಜಮೀನುಗಳು ಅಭಿವೃದ್ಧಿ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td rowspan="3">ಕೆಐಎಡಿ ಕಾಯ್ದೆ ಕಲಂ 28(3) ರಡಿ ವಿಶೇಷ ಭೂಸ್ವಾಧೀನಾಧಿಕಾರಿಗಳು, ಪ್ರಸ್ತಾವಿತ ಜಮೀನು ಭೂಪರಿವರ್ತನೆ ಆಗಿದ್ದರೂ ಸಹ ಮಂಡಳಿಯಲ್ಲಿ ಭೂಪರಿವರ್ತನೆಗೊಂಡ ಜಮೀನಿಗೆ ಹೆಚ್ಚುವರಿ ಪರಿಹಾರ ನಿಗದಿಪಡಿಸುವ ಅವಕಾಶವಿರುವ ಹಿನ್ನೆಲೆಯಲ್ಲಿ ಹಾಗೂ ಒಂದೊಮ್ಮೆ ಸದರಿ ಪ್ರದೇಶವನ್ನು ಭೂಸ್ವಾಧೀನದಿಂದ ಹೊರತುಪಡಿಸುವ ಬಗ್ಗೆ ಆದೇಶ ಹೊರಡಿಸಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದಲ್ಲಿ, ಪ್ರಸ್ತಾವಿತ ಕೈಗಾರಿಕಾ ಪ್ರದೇಶದ ಆಯಕಟ್ಟಿಗೆ ಧಕ್ಕೆ ಉಂಟಾಗದಿರುವುದನ್ನು ಗಮನದಲ್ಲಿಟ್ಟುಕೊಂಡು ಹಾಗೂ ವಿಶೇಷ ಭೂಸ್ವಾಧೀನಾಧಿಕಾರಿಗಳಿಗೆ ಮಂಡಳಿಯು ಅಧಿಸೂಚಿಸಿದ ಯಾವುದೇ ಪ್ರದೇಶವನ್ನು ತಮ್ಮ ಹಂತದಲ್ಲಿಯೇ ಕೈಬಿಡುವ ಅಧಿಕಾರ ಇಲ್ಲದಿರುವ ಹಿನ್ನೆಲೆಯಲ್ಲಿ, ಕಲಂ 28(3) ರಡಿ ಆದೇಶ ಹೊರಡಿಸಿದ್ದು, ಇನ್ನುಳಿದಂತೆ ಒಟ್ಟಾರೆ ಯೋಜನಾ ಪ್ರದೇಶದ ಜೆ.ಎಂ.ಸಿ. ಕಾರ್ಯ ಅಂತಿಮಗೊಳಿಸಿ, ಕಲಂ 28(4) ರಡಿ ಅಂತಿಮ ಅಧಿಸೂಚನೆ ಪ್ರಸ್ತಾವನೆ ಸಲ್ಲಿಸಲು ಬಾಕಿ ಇರುತ್ತದೆ.<br><br>ಶಿವಾರಪಟ್ಟಣ ಗ್ರಾಮದ ಅಭಿವೃದ್ಧಿ ಹೊಂದಿದ ಜಮೀನನ್ನು ಕೈಗಾರಿಕೆಗೆ ಯಾವುದೇ ಧಕ್ಕೆಯಾಗದಂತೆ ಪರಿಶೀಲಿಸಿ ವಿಧಿ 28(4)ರ ಅಧಿಸೂಚನೆ ಹೊರಡಿಸುವ ಸಂದರ್ಭದಲ್ಲಿ ಪುನರ್ ಪರಿಶೀಲಿಸಿ ಕ್ರಮ ವಹಿಸಲಾಗುತ್ತದೆ.</td></tr>
<tr><td>ಇ)</td><td>ಅಭಿವೃದ್ಧಿಯಾಗಿರುವ ಜಮೀನುಗಳನ್ನು ಪರಿಶೀಲಿಸದೆ ಹಿಂದಿನ ವಿಶೇಷ ಭೂಸ್ವಾಧೀನಾಧಿಕಾರಿ ರವರು ಜಮೀನಿನ ಮಾಲೀಕರಿಂದ ಹಣಕ್ಕಾಗಿ ಒತ್ತಾಯಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td></tr>
<tr><td>ಈ)</td><td>ಸರ್ಕಾರ ಈ ಕೂಡಲೇ ಅಭಿವೃದ್ಧಿಯಾಗಿರುವ ಜಮೀನುಗಳನ್ನು ಪರಿಶೀಲಿಸಿ, ಸದರಿ ಜಮೀನುಗಳನ್ನು ಅಧಿಸೂಚನೆಯಿಂದ ಕೈಬಿಡಲು ಕ್ರಮವಹಿಸುವುದೇ ಹಾಗೂ ಭ್ರಷ್ಟಾಚಾರ ಎಸಗಿರುವ ವಿಶೇಷ ಭೂಸ್ವಾಧೀನಾಧಿಕಾರಿ ರವರ ಮೇಲೆ ಕ್ರಮ ಜರುಗಿಸಲಾಗುವುದೇ?</td></tr>
</table>

**ಸಂಖ್ಯೆ: ಸಿಐ 691 ಐಎಪಿ 2025**

**(ಎಂ.ಬಿ. ಪಾಟೀಲ)**

ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು